-

ಅ.ದಾ. ಸಂಖ್ಯೆ:- 92/2018
ಡಿಡಬ್ಲ್ಯೂ:- 2

ದಿನಾಂಕಃ 02-12-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರಃ ಶ್ರೀ. ಬಿ.ವಿ. ವಕೀಲರಿಂದ.

7. ಮೇಗರವಳ್ಳಿ ಗ್ರಾಮದ ಸರ್ವೆ ನಂ. 309/1 ಮತ್ತು 309/2 ಕ್ಕೆ ಸಂಬಂಧಿಸಿದಂತೆ ಗ್ರಾಮಪಂಚಾಯತಿಯಲ್ಲಿ ದಾಖಲೆ ಇರುತ್ತದೆ. ಸರ್ವೆ ನಂ. 309/1 ಮತ್ತು 309/2 ರಲ್ಲಿ ಗ್ರಾಮಪಂಚಾಯತಿಗೆ ಒಟ್ಟು 6 ಎಕರೆ 4 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸದರಿ ವಿಸ್ತೀರ್ಣದ ಬಗ್ಗೆ ನಮೂದು ಇರುತ್ತದೆ. ಸದರಿ ವಿಸ್ತೀರ್ಣದ ಜಮೀನು ಗ್ರಾಮಪಂಚಾಯತಿಗೆ ಸರ್ಕಾರದಿಂದ 1993-94 ರಲ್ಲಿ ಹಸ್ತಾಂತರವಾಗಿರುತ್ತದೆ. ಸದರಿ ಹಸ್ತಾಂತರದ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಸರ್ವೆ ನಂ. 309/1 ಮತ್ತು 309/2 ರಲ್ಲಿ ಗ್ರಾಮಪಂಚಾಯತಿಯಿಂದ ಸಾರ್ವಜನಿಕರಿಗೆ ನಿವೇಶನಗಳನ್ನು ಮಂಜೂರಾತಿ ಮಾಡಿರುವುದಿಲ್ಲ. ಸದರಿ ಸರ್ವೆ ನಂ. 309/1 ಮತ್ತು 309/2 ರ ಜಮೀನು ಖಾಲಿ ಜಮೀನಾಗಿರುತ್ತದೆ. ಸದರಿ ಸರ್ವೆ ನಂ. 309/1 ಮತ್ತು 309/2 ರ ಜಮೀನುಗಳು ಒಟ್ಟಿಗೆ ಇರುತ್ತವೆ. ಸದರಿ ಜಮೀನುಗಳು ಯಾರಿಂದಲೂ ಒತ್ತುವರಿ ಆಗಿರುವುದಿಲ್ಲ.

8. ಸರ್ವೆ ನಂ. 309/1 ಮತ್ತು 309/2 ರ ಚೆಕ್ಕುಬಂದಿಗಳನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಸರ್ವೆ ನಂ. 309/1 ಮತ್ತು 309/2 ರ ಅಕ್ಕಪಕ್ಕ ಒಂದು ದಿಕ್ಕಿನಲ್ಲಿ ಗ್ರಾಮಪಂಚಾಯತಿಯ ಶೌಚಾಲಯ ಇರುತ್ತದೆ, ಉಳಿದ ಕಡೆ ನನಗೆ ಗೊತ್ತಾಗುವುದಿಲ್ಲ. ಸದರಿ ಶೌಚಾಲಯವು ಸುಮಾರು ವರ್ಷಗಳ ಹಿಂದೆ ನಿರ್ಮಾಣವಾಗಿರುತ್ತದೆ. ಸದರಿ ಶೌಚಾಲಯವು ಯಾವ ಸರ್ವೆ ನಂಬರ್ ನ ಜಮೀನಿನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಶೌಚಾಲಯವು ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಅಂಚೆ ಮತ್ತು ತಂತಿ ಇಲಾಖೆಗೆ ಸಂಬಂಧಿಸಿದ ಕಟ್ಟಡವು ಸರ್ವೆ ನಂ. 309/2 ರಲ್ಲಿ ಬರುತ್ತದೆ. ಸದರಿ ಕಟ್ಟಡವು ಎಷ್ಟು ವಿಸ್ತೀರ್ಣದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 309/1 ಮತ್ತು 309/2 ರಲ್ಲಿ ನಮ್ಮ ಗ್ರಾಮಪಂಚಾಯತಿಗೆ ಸಂಬಂಧಿಸಿದ ಕಟ್ಟಡಗಳು ಇರುತ್ತವೆ. ಸದರಿ ಕಟ್ಟಡಗಳನ್ನು ಶೌಚಾಲಯ, ಅಂಚೆ ಕಛೇರಿ ಮತ್ತು ಕೋಳಿ ಅಂಗಡಿಗೆ ಉಪಯೋಗಿಸುತ್ತಿದ್ದಾರೆ.

9. ನಮ್ಮ ಗ್ರಾಮಪಂಚಾಯತಿ ಅಕ್ಕಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವುದಿಲ್ಲ. ಈ ದಾವೆಯ ವಾದಿಯು ನಮ್ಮ ಗ್ರಾಮಪಂಚಾಯತಿ ಜಾಗವನ್ನು ಒತ್ತುವರಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಮೇಗರವಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷಳಾದ ನಂತರ ಸರ್ವೆ ನಂ. 309/1 ಮತ್ತು 309/2 ರ ಜಮೀನನ್ನು ಅಳತೆಗೆ ಒಳಪಡಿಸಿರುವುದಿಲ್ಲ. ನಾನು ಮೇಗರವಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷಳಾದ ನಂತರ ಈ ದಾವೆಯ ವಾದಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಮಾರ್ಚ್ 2021 ರಿಂದ ನಾನು ಮೇಗರವಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷಳಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಮೇಗರವಳ್ಳಿ ಗ್ರಾಮಪಂಚಾಯತಿಯಲ್ಲಿ ಕೆಳಪೇಟೆ ಎಂಬ ಏರಿಯಾ ಬರುತ್ತದೆ. ಸದರಿ ಕೆಳಪೇಟೆಯಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಸರ್ವೆ ನಂ. 309/1 ಮತ್ತು 309/2 ರ ಜಮೀನುಗಳು ಸದರಿ ಕೆಳಪೇಟೆಯಲ್ಲಿಯೇ ಬರುತ್ತವೆ. ಸಾಕ್ಷಿದಾರರಿಗೆ ದಿಃ 28-09-2020 ರ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-46 ಎಂದು ಗುರುತಿಸಲಾಯಿತು. ಸದರಿ ನಿಪಿ-46 ರ ಪತ್ರದ ಮೇಲೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರಿಗೆ ದಿಃ 06-11-2020 ರ ಹಿಂಬರಹದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-47 ಎಂದು ಗುರುತಿಸಲಾಯಿತು. ಸರ್ವೆ ನಂ. 309/1 ಮತ್ತು 309/2 ರ ಜಮೀನಿನ ದಾಖಲಾತಿಗಳನ್ನು ಕೋರಿ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿರಬಹುದು, ಆದರೆ ನನಗೆ ನೆನಪಿಲ್ಲ. ದಿಃ 19-11-2020 ರಂದು ತಹಶೀಲ್ದಾರ್ ರವರು ನಮ್ಮ ಕಛೇರಿಗೆ ಸರ್ವೆ ನಂ. 309/1 ಮತ್ತು 309/2 ರ ಜಮೀನುಗಳು ಗ್ರಾಮಪಂಚಾಯತಿಗೆ ವರ್ಗಾವಣೆ ಆದ ಬಗ್ಗೆ ಯಾವುದೇ ದಾಖಲಾತಿಗಳು ಲಭ್ಯವಿಲ್ಲ ಎಂದು ಒಂದು ಹಿಂಬರಹ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

10. ವಾದಿಯವರು ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದಾವೆಯ ದಾವಾ ಕಾರಣವನ್ನು ನಾನು ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ದಾವಾ ಕಾರಣ ಉದ್ಭವಿಸಿದ ದಿನಾಂಕದಂದು ನಾನು ಮೇಗರವಳ್ಳಿ ಗ್ರಾಮಪಂಚಾಯತಿಯ ಅಧ್ಯಕ್ಷಳಾಗಿರಲಿಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿಯಲ್ಲಿ ಸರ್ವೆ ನಂ. 309/1 ಮತ್ತು 309/2 ರಲ್ಲಿ ಮೇಗರವಳ್ಳಿ ಗ್ರಾಮಪಂಚಾಯತಿಗೆ 6 ಎಕರೆ 4 ಗುಂಟೆ ವಿಸ್ತೀರ್ಣದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಗ್ರಾಮಪಂಚಾಯತಿಯವರು ವಾದಿಯವರ ಜಾಗವನ್ನು ಕಬಳಿಸುವ ದೃಷ್ಟಿಯಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ವಾದಿಯವರು ಹಾಜರುಪಡಿಸಿರುವ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ಖರೀದಿ ಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 309/1 ಮತ್ತು 309/2 ರ ಪಹಣಿ ಪತ್ರಿಕೆಗಳನ್ನು ನಾನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಗಳಲ್ಲಿ ಜಮೀನುಗಳು ನಮ್ಮ ಗ್ರಾಮಪಂಚಾಯತಿಯ ಹೆಸರಿನಲ್ಲಿ ಇರುತ್ತವೆ. ಹಕ್ಕುಬದಲಾವಣೆ ವಹಿ ಎಂದರೆ ಏನು ಎಂದು ನನಗೆ ಗೊತ್ತಿರುತ್ತದೆ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಹಕ್ಕುದಾರಿಕೆಯು ನಮ್ಮ ಗ್ರಾಮಪಂಚಾಯತಿಗೆ ನಮೂದಾಗಿರುತ್ತದೆ. ಸರ್ವೆ ನಂ. 309/1 ಮತ್ತು 309/2 ರ ಜಮೀನುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿಗೂ ಮತ್ತು ನಮ್ಮ ಗ್ರಾಮಪಂಚಾಯತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರಾಜಕೀಯ ದ್ವೇಶದಿದ ವಾದಿಗೆ ತೊಂದರೆ ನೀಡುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮಪಂಚಾಯತಿಯ ಹಿಂದಿನ ಅಧ್ಯಕ್ಷರಾದ ಪ್ರಮೋದ ಹೆಗ್ಡೆ ರವರು ಬಿ.ಜೆ.ಪಿ ಪಕ್ಷದ ಸಕ್ರಿಯ ಕಾರ್ಯಕರ್ತರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವಾದಿಯವರು ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರು ಎಂದರೆ ನನಗೆ ಗೊತ್ತಿಲ್ಲ. ನಾವು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳಿಗೂ ಮತ್ತು ದಾವಾ ಅನುಸೂಚಿ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ.